# ಆಧುನಿಕತೆಯ ಅವಾಂತರಗಳಿಗೆ ಪರಿಹಾರ: ಕಂಬಾರರ 'ಬೋಳೇಶಂಕರ'

**ಡಾ. ರಾಜಶೇಖರ ಬಿರಾದಾರ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಶ್ರೀ. ಸಿ. ಎಂ. ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಯರಗಟ್ಟಿ, ಬೆಳಗಾವಿ ಜಿಲ್ಲೆ.

**Article Link:** https://aksharasurya.com/2023/07/rajashekara-beradhar/

**"ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ**
**ಈ ವನ್ಯ ಸಂಸ್ಕೃತಿಯ ಮುಂದೆ"**
**(ಬೆರಳ್ಗೆ ಕೊರಳ್, ಪು. 28)**

ಎಂಬ ಕುವೆಂಪು ಅವರ ನಾಟಕದ ಸಾಲುಗಳು ಏಕಕಾಲಕ್ಕೆ ನಗರ ಜೀವನದ ದುರ್ಬರತೆ ಹಾಗೂ ಗ್ರಾಮ್ಯ, ವನ್ಯ ಜೀವನದ ಸಹಜ ಸುಂದರತೆಗಳನ್ನು ಪ್ರಕಟಿಸುತ್ತವೆ. ಪಟ್ಟಣದ ಸೊಗಸು ಎಷ್ಟೇ ಮೋಹಕವೆನಿಸಿದರೂ, ಬಹುಕಾಲ ಬಾಳದು. ಗ್ರಾಮ್ಯ ಜೀವನವು ಮೇಲ್ನೋಟಕ್ಕೆ ಒರಟು ಎನಿಸಿದರೂ ಆಂತರ್ಯದಲ್ಲಿ ಮಾನವೀಯತೆಯ ಗಣಿಯೇ ಆಗಿರುತ್ತದೆ.

ನಗರೀಕರಣದಿಂದ ನಾಡಿನ ಮೂಲ ಸಂಸ್ಕೃತಿಯು ತನ್ನ ನೆಲೆಯನ್ನು ಕಳೆದುಕೊಳ್ಳುತ್ತಿದ್ದು, ಗ್ರಾಮೀಣ ಬದುಕು ಅಸ್ಥಿರವಾಗುತ್ತಿದೆ. ಶ್ರಮಜೀವನಕ್ಕೆ ಬೆಲೆಯೇ ಇಲ್ಲದಂತಾಗಿದ್ದು, ದುರಾಸೆಯ, ದೌರ್ಜನ್ಯದ, ಸ್ವಾರ್ಥಿಗಳ ತಾಣಗಳಾಗಿ ಆಧುನಿಕ ನಗರಗಳು ಮೈದಾಳುತ್ತಿವೆ. ಅಧಿಕಾರಕ್ಕಾಗಿ ಹಾತೊರೆಯುತ್ತ ಭೋಗಗಳ ಬದುಕಿನ ಆಕರ್ಷಣೆಗಳಿಗೆ ಒಳಗಾಗಿರುವ ಇಂದಿನ ಜನತೆಯು ಪರಂಪರೆ, ಮೌಲ್ಯಗಳನ್ನು ಕಡೆಗಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ಅಧಿಕಾರ ವಿಮುಖತೆ, ಶ್ರಮಜೀವನ, ಸರಳ ಬದುಕನ್ನೇ ಮೌಲ್ಯವಾಗಿಸಿ, 'ಹಸಿರೇ ಉಸಿರು' ಎಂಬುದನ್ನು ತಿಳಿಸುವುದು ಚಂದ್ರಶೇಖರ ಕಂಬಾರರ 'ಬೆಪ್ತಕ್ಕಡಿ ಬೋಳೇಶಂಕರ' ನಾಟಕದ ಪ್ರಮುಖ ಆಶಯವಾಗಿದೆ.

ಗ್ರಾಮೀಣ ಸಂಸ್ಕೃತಿಯ ಪ್ರತಿನಿಧಿಯಾದ ಬೋಳೇಶಂಕರನು ಹೊಸ ಬದುಕಿನ ಕನಸನ್ನು ಕಂಡವನು. 'ರಾಜನಾಗಲಿ, ಮಂತ್ರಿಯಾಗಲಿ ದುಡಿದು ತಿನ್ನಬೇಕೇ ಹೊರತು, ಸೋಮಾರಿಗಳಾಗಬಾರದು' ಎಂಬ ಚಿಂತನೆ ಅವನದು. 'ರಾಜ್ಯದಲ್ಲಿ ಸೈನ್ಯ ಇರಬಾರದು, ತೆರಿಗೆಗಳು, ನಾಣ್ಯಗಳು ಇರಬಾರದು, ರಾಜ–ರಾಣಿ

ಎಲ್ಲರೂ ದುಡಿದು ತಿನ್ನಬೇಕು. ದುಡಿಯದ ಸೋಮಾರಿಗಳಿಗೆ ತಿನ್ನುವ ಹಕ್ಕಿಲ್ಲ' ಎಂಬುದು ಅವನ ಸಿದ್ಧಾಂತ.

ಹಸಿರನ್ನೇ ಉಸಿರನ್ನಾಗಿಸಿಕೊಂಡ ಅವನಿಗೆ ಲೋಭ–ಮೋಹಗಳಿಲ್ಲ. 'ರಾಜ್ಯದ ಅಧಿಕಾರವನ್ನೇ ತಿರಸ್ಕರಿಸುವ ಇವನು, ರಾಜಕುಮಾರಿಯನ್ನು ಮದುವೆಯಾಗಿ ಅವಳನ್ನೂ ಶ್ರಮಿಕಳನ್ನಾಗಿಸುವುದು' ವಿಶೇಷವಾಗಿದೆ. "ಒಬ್ಬ ಒಳ್ಳೆ ಕೆಲಸ ಮಾಡುವುದು ಪುಣ್ಯದ ತುರಾಯಿಗಳನ್ನು ರುಮಾಲಿಗೆ ಸಿಕ್ಕಿಸಿಕೊಳ್ಳಲಿಕ್ಕೆ ಅಲ್ಲ, ಅದು ಅವನ ಜೀವನ ರೀತಿ ಅಷ್ಟೆ" ಎಂಬ ಮಾತು ಅವನ ನಿಷ್ಕಲ್ಮಷ ಬದುಕನ್ನು ತಿಳಿಸುತ್ತದೆ. 'ನೀರು ತನ್ನ ಗುಣಕ್ಕನುಗುಣವಾಗಿ ಸ್ವಚ್ಛಂದವಾಗಿ ಹರಿಯುತ್ತ ತನ್ನ ನಿಯಮಗಳನ್ನು ಪಾಲಿಸುವಂತೆ, ಮನುಷ್ಯನು ಸಹಜವಾಗಿ ಬದುಕಬೇಕು' ಎಂಬುದು ಅವನ ಆದರ್ಶ. 'ಸಮಾಜವನ್ನು ತಿದ್ದಲು ನಿಯಮಗಳು, ಕಾನೂನುಗಳು ಇರಬಾರದು, ದಾರಿತಪ್ಪಿದವರಿಗೆ ಗಾದೆ ಬಲ್ಲವರು (ಹಿರಿಯರು, ಅನುಭವಸ್ಥರು) ಬುದ್ಧಿ ಹೇಳುತ್ತಾರೆ" ಎಂದು ಸರಳ ಬದುಕಿನ ಸೂತ್ರಗಳನ್ನು ಮುಂದಿಟ್ಟಿದ್ದಾನೆ. 'ಕೆಲಸ ಮಾಡಿದವರು ಊಟ ಮಾಡಿದ ನಂತರ ಸೋಮಾರಿಗಳ ಊಟ' ಎಂದು ಹೇಳುವ ಮೂಲಕ ಶ್ರಮಕ್ಕೆ, ದುಡಿಮೆಗೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ.

ನಗರವೆಂಬುದು ಅವನ ಪಾಲಿಗೆ ಕೊಳೆ ಚರಂಡಿಯ, ಕೊಚ್ಚೆ ನೀರಿನ, ನಕ್ಷತ್ರವಿಲ್ಲದ, ಬೆಳಕಿರುವ ಸೀಮೆಯಾಗಿದೆ. ಮಿಲ್ಲಿನ ಹೊಗೆಯಿಂದ ತುಂಬಿದ ಆಕಾಶ, ಸೈರನ್ನಿನದನಿ – ಇವುಗಳಿಂದ ಆತ್ಮವಿಲ್ಲದ ಸಿಟಿಯಾಗಿದೆ. ನಗರದ ಬದುಕಿನಿಂದ ಬಿಡುಗಡೆ ಪಡೆದು ಕಣ್ಣುಗಳಿಗೆ ಕನಸು ಕೊಡುವ, ಯೌವ್ವನವನ್ನು ಕಾಪಾಡುವ, ಎಳೆಯರಿರುವ ಒಲವಿನ ಸೀಮಡ, ಹಸಿರಿನ ತವರೂರಿನ ಬಯಕೆಯುಳ್ಳವನಾಗಿದ್ದಾನೆ.

ಈ ನಾಟಕದಲ್ಲಿ ಶಿವಾಪುರದ ಮೂರು ಜನರು ಸಹೋದರರಾದ ಸರದಾರ ಸೋಮಣ್ಣ. ಸಾವ್ಕಾರ ಕಾಮಣ್ಣ, ಬೋಳೇಶಂಕರ ಇವರುಗಳನ್ನು ತಮ್ಮ ಬಲೆಗೆ ಬೀಳಿಸಲು ಸೈತಾನನು ಕಳುಹಿಸಿದ ಮೂರು ಪಿಶಾಚಿಗಳು ಬರುತ್ತವೆ. ಅಧಿಕಾರದ ಆಸೆ, ಧನದ ಮೋಹಕ್ಕೆ ಬಲಿಯಾದ ಸರದಾರ ಸೋಮಣ್ಣ, ಸಾವ್ಕಾರ ಕಾಮಣ್ಣ ಇವರುಗಳು ಪಿಶಾಚಿಗಳ ಬಲೆಗೆ ಬೀಳುತ್ತಾರೆ. ನಿಸ್ವಾರ್ಥಿ, ಶ್ರಮಜೀವಿ, ನೇರ ನಡೆ–ನುಡಿಯವನಾದ ಬೋಳೇಶಂಕರನನ್ನು ಸೆಳೆಯಲು ಪ್ರಯತ್ನಿಸಿ ಪಿಶಾಚಿಗಳೇ ಸೋಲುವ ಪ್ರಸಂಗವು ಈ ನಾಟಕದ ಪ್ರಮುಖ ವಸ್ತುವಾಗಿದೆ.

ಲಿಯೋ ಟಾಲ್‌ಸ್ಟಾಯ್ ಅವರ 'How much land a man

need?' ಎಂಬ ಕತೆಯನ್ನು ಆಧರಿಸಿ ರಚಿತವಾದ ನಾಟಕವೇ ಬೋಳೇಶಂಕರ. ಸಮಾಜವಾದಿ, ಸಮಾನತೆ ಮತ್ತು ಶ್ರಮ ಸಂಸ್ಕೃತಿಯ ಮಹತ್ವವನ್ನು ಇದು ಸಾರುತ್ತದೆ. ಸರದಾರ ಸೋಮಣ್ಣ, ಸಾವ್ಕಾರ ಕಾಮಣ್ಣ ಹಾಗೂ ಬೋಳೇಶಂಕರ ಮೂರು ಜನ ಅಣ್ಣತಮ್ಮಂದಿರು. ಮೊದಲಿನ ಇಬ್ಬರು ಆಸೆಬುರುಕರು ಮತ್ತು ಹೆಂಡತಿಯರ ದಾಸರು. ಸಣ್ಣವನಾದ ಬೋಳೇಶಂಕರನು ಮಾತ್ರ ಶ್ರಮಜೀವಿ ಮತ್ತು ಸಾತ್ವಿಕ ಸ್ವಭಾವದವನು. ತನ್ನನ್ನು ಮಣಿಸಲು ಬಂದ ಪಿಶಾಚಿಗಳನ್ನು ತಾನು ನಂಬುವ ಸತ್ಯದಿಂದಲೇ ಮಣಿಸಿ, ಮೂರು ವರಗಳನ್ನು ಪಡೆಯುತ್ತಾನೆ (ಹೊಟ್ಟೆ ನೋವಿನ ಔಷಧಿ, ಚಿನ್ನ ಹಾಗೂ ಸೈನಿಕರನ್ನು ಮಾಡುವ ಮಂತ್ರ). ಮಾತ್ರವಲ್ಲ ರಾಜತ್ವವೇ ಅವನ್ನು ಅರಸಿಕೊಂಡು ಬಂದರೂ ತಿರಸ್ಕರಿಸಿ, ತನ್ನ ನಿಯಮಗಳಿಗೆ ಒಪ್ಪುವುದಾದರೆ ಮಾತ್ರ ರಾಜನಾಗುವೆನೆಂದು ಷರತ್ತು ಹಾಕುತ್ತಾನೆ. "ನಾನು ರಾಜನಾದರೆ, ನನ್ನ ರಾಜ್ಯದಲ್ಲಿ ಸೈನ್ಯ ಇರುವುದಿಲ್ಲ, ತೆರಿಗೆ ಇರುವುದಿಲ್ಲ, ನಾಣ್ಯಗಳು ಇರುವುದಿಲ್ಲ. ರಾಜ–ರಾಣಿಯರಿಂದ ಹಿಡಿದು ಎಲ್ಲರೂ ದುಡೀತಾರೆ..." ಎಂಬ ಷರತ್ತಿನ ಮೇರೆಗೆ ಬಹುಮಾನ ಪಡೆಯುತ್ತಾನೆ.

ಹಸಿರು ಸಮೃದ್ಧಿಯ ಸಂಕೇತ. ಗ್ರಾಮೀಣ ಸಂಸ್ಕೃತಿಯ ಸೊಗಡು. ಶ್ರಮಜೀವನದ ಮೂಲಕ ಹಸಿರನ್ನು ಕಾಪಾಡಿಕೊಳ್ಳಬಹುದು. ಎರಡು, ಎರಡು ಸೇರಿ ಐದು ಮಾಡುವುದು ನಗರ ಜೀವನದ ಸಂಸ್ಕೃತಿ, ಮೈಗಳ್ಳರ ಸಂಸ್ಕೃತಿ. ಇದಕ್ಕೆ ವಿರೋಧಿ ನಮ್ಮ ಬೋಳೇಶಂಕರ. ಸರಳ ಬದುಕು, ಅಧಿಕಾರ ವಿಮುಖತೆ, ಶ್ರಮಜೀವನ, ಕೃಷಿ ಪ್ರೀತಿ, ದುಡಿದವರಿಗೆ ಊಟ ಇತ್ಯಾದಿ ಅಂಶಗಳು ಬೋಳೇಶಂಕರನ ಸಹಜ ಮೌಲ್ಯಗಳು. ನಾಟಕದ ಪ್ರಾರಂಭದಿಂದ ಅಂತ್ಯದ ವರೆಗೆ ಇದನ್ನೇ ನಾವು ಬೋಳೇಶಂಕರನ ಮಾತುಗಳಲ್ಲಿ ಕಾಣುತ್ತೇವೆ. ಸೋದರರು ಆಸ್ತಿ ಲಪಟಾಯಿಸಿದಾಗ, ಆಸ್ತಿ ಕಳೆದುಕೊಂಡು ಮತ್ತೆ ಬೋಳೇಶಂಕರನ ಮನೆಯಲ್ಲಿ ಇರಲು ಬಂದಾಗ, ತನ್ನ ಮನೆಯಲ್ಲೇ ಕೊಟ್ಟಿಗೆಯಲ್ಲಿ ಊಟಕ್ಕೆ ಕುಳಿತುಕೋ ಎಂದಾಗ, ರಾಜಕುಮಾರಿಯ ವಿವಾಹ ಸಂದರ್ಭದಲ್ಲಿ ಎಲ್ಲ ಸಮಯದಲ್ಲೂ 'ಹಸಿರೇ ಉಸಿರು' ಎಂಬ ಭಾವ ಪ್ರಕಟವಾಗುವುದಲ್ಲದೇ ತಾನು 'ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ' ಎಂಬುದನ್ನು ತೋರಿಸಿಕೊಳ್ಳುತ್ತಾನೆ.

ಶ್ರಮವಿಲ್ಲದೆ ಅತ್ಯಧಿಕ ಹಣವನ್ನು ಸಂಪಾಧಿಸುವ, ವೈಭವದ ಜೀವನ ನಡೆಸುವುದೇ ಆದರ್ಶ ಎಂಬ ಬಗೆಯನ್ನು ಪಿಶಾಚಿಗಳು ಸಾರಿ ಸಾರಿ ಹೇಳಿದರೂ ಅದರ ಕಡೆಗೆ ಸಾಗದೆ, 'ದುಡಿಮೆಯೇ ಬದುಕು' ಎಂಬಂತೆ ಬಾಳಿದ ಸರಳ ಬದುಕಿನ ಬೋಳೇಶಂಕರನನ್ನು ಪಿಶಾಚಿಗಳು ಏನೂ ಮಾಡಲಾರದೆ ಸೋತು ಸಾಯುವುದನ್ನು

ಚಿತ್ರಿಸಲಾಗಿದೆ. ಬೋಳೇಶಂಕರನ ಈ ನಂಬಿಕೆಯೇ ಪಿಶಾಚಿಗಳೊಂದಿಗೆ ಅದರ ಮಾಲಿಕ ಸೈತಾನನನ್ನೂ ನಿವಾರಿಸಲು ಸಹಕಾರಿಯಾಯಿತು. ಅಣ್ಣಂದಿರು ಆಸ್ತಿಯನ್ನು ಲಪಟಾಯಿಸಿ ದುಡಿಯದೆ ಉಣ್ಣುವ ಪ್ರವೃತ್ತಿಯಿಂದ ಎಲ್ಲವನ್ನೂ ಕಳೆದುಕೊಂಡು ಮತ್ತೆ ಬೋಳೇಶಂಕರನ ಆಶ್ರಯಕ್ಕೆ ಬರುವಂತಾಯಿತು. ಪಿಶಾಚಿಗಳು ತೋರಿಸಿಕೊಟ್ಟ ನಾಣ್ಯ ಮತ್ತು ಸಿಪಾಯಿಗಳನ್ನು ಉಂಟುಮಾಡುವ ವಿಧಾನವನ್ನು ಆಟದ ಮೋ–ಜಿಗೆ ಬಳಸಿಕೊಂಡ, ರಾಜಕುಮಾರಿಯನ್ನು ವಿವಾಹವಾದರೂ ಸೈನ್ಯವಿಲ್ಲದೆ, ಹಣದ ಅವಶ್ಯಕತೆ ಬಾರದಂತೆ ಸರಳತೆಯಿಂದ ಬದುಕಿ ಜನಾನುರಾಗಿಯಾಗಿದ್ದು, ದುಡಿದವರಿಗೆ ಮೊದಲ ಪಂಕ್ತಿಯ ಊಟಹಾಕುವ ಪದ್ಧತಿ ಎಲ್ಲವೂ ಶ್ರಮಜೀವನ, 'ಸರಳ ಬದುಕನ್ನು ರೂಪಿಸಿಕೊಂಡವರನ್ನು ಯಾರೂ ಏನೂ ಮಾಡಲಾರರು' ಎಂಬುದನ್ನು ಸೂಚಿಸುತ್ತವೆ.

ಸೈತಾನನು ತಲೆಯಿಂದ ಕೆಲಸ ಮಾಡಿ ಬದುಕುವುದು ಜಾಣ್ಮೆ. ಮನುಷ್ಯನಿಗಿರುವ ತಲೆ ಉಪಯೋಗವಾಗಬೇಕು. ಮೊದಲನೆಯದಾಗಿ ನಾಣ್ಯಗಳ ಬಳಕೆಯನ್ನು ಜಾರಿಗೆ ತಂದರೆ 10 ಚೀಲದ ಧಾನ್ಯವನ್ನು ನಾಣ್ಯದ ರೂಪದಲ್ಲಿ ಕೈಲಿ ಇಟ್ಟುಕೊಳ್ಳಬಹುದು ನಾಣ್ಯದ ಬಳಕೆಯಿಂದ ಜನಕೋಟಿಯನ್ನು ನಿಯಂತ್ರಿಸಬಹುದು. ಬುದ್ಧಿಯನ್ನು ಉಪಯೋಗಿಸುವುದರಿಂದ ಮಾತ್ರ ಇದು ಸಾಧ್ಯ. ತಲೆಯನ್ನು ಉಪಯೋಗಿಸದೆ ಇರುವುದರಿಂದ ನೀವೆಲ್ಲ ನಗರದ ಸುಖದಿಂದ ವಂಚಿತರಾಗಿದ್ದೀರಿ. ತಲೆಯ ಬೆಲೆ ತಿಳಿದರೆ ಸ್ವರ್ಗ ಸುಖ ಸಿಗುವ ಸಿಟಿಯನ್ನು ಕಟ್ಟಬಹುದು ಎಂದು ಹೇಳುವುದರ ಮೂಲಕ ತಲೆಯಿಂದ ಕೆಲಸ ಮಾಡುವ ಅಗತ್ಯವನ್ನು ಹೇಳುತ್ತಾನೆ. ವಿಜ್ಞಾನ – ತಂತ್ರಜ್ಞಾನ ಆಧಾರಿತ ಆಧುನಿಕತೆಯು ಈ ಸೈತಾನನಂತೆ ತಲೆಯಿಂದ ಕೆಲಸ ಮಾಡುವುದನ್ನೇ ಕಲಿಸುತ್ತಿದೆ. ಇದರ ಪರಿಣಾಮವೆಂದರೆ, ರಾಕ್ಷಸೀ ಪ್ರವೃತ್ತಿ, ಕೊಳ್ಳುಬಾಕುತನ ಹಾಗೂ ಮೋಸ ಮಾಡುವ ಗುಣಗಳು ತಾಂಡವವಾಡುತ್ತಿವೆ. ಸೈತಾನನ 'ತಲೆಯಿಂದ ಮಾಡುವ ಕೆಲಸ'ಕ್ಕೆ ಪ್ರತಿಯಾಗಿ ಬೋಳೇಶಂಕರನ ರಾಜ್ಯದ ಜನತೆಯು ಕಾಯ(ಕೈ ಮತ್ತು ಕಾಲಿನಿಂದ)ದಿಂದ ಮಾಡುವ 'ಕಾಯಕ'ವೇ ಪ್ರಧಾನವೆಂದು ಪ್ರತಿಪಾದಿಸುತ್ತಾರೆ.

"ದುರಾಸೆ, ಸ್ವಾರ್ಥ, ಮತ್ಸರಗಳೇ ಮನುಷ್ಯನೊಳಗಿನ ಪಿಶಾಚಿಗಳು ಮತ್ತು ಸೈತಾನಗಳಾಗಿವೆ. ಆಧುನಿಕತೆ–ಕೈಗಾರಿಕೀಕರಣಗಳು ಆಧುನಿಕ ಸಮಾಜದ ಸೈತಾನಗಳು" ಎಂಬುದನ್ನು ನಾಟಕವು ಪ್ರತಿಫಲಿಸುತ್ತದೆ. ಸಂಯಮ ಸರಳತೆಯೊಂದಿಗೆ ಆಧುನಿಕತೆಯ ಸೋಂಕು ತಗುಲದ ಪರಂಪರಾಗತ ಜೀವನ ಶೈಲಿ ಮತ್ತು ಸಮಾನತೆಗಳನ್ನು ಆಧರಿಸಿದ ಸಮಾಜವಾದಿ ಸಮಾಜವು ಬೋಳೇಶಂಕರನ

ಹಾಗೂ ಕಂಬಾರರ ಕನಸಾಗಿದೆ.

ಒಟ್ಟಿನಲ್ಲಿ ಆಧುನಿಕತೆಯ ಎಲ್ಲ ಅವಾಂತರಗಳಿಗೆ ಶರಣ ಸಂಸ್ಕೃತಿಯನ್ನು ಆಧರಿಸಿದ ಬೋಳೇಶಂಕರನ ಸರಳ ಹಾಗೂ ಶ್ರಮಜೀವನವೇ ಪರಿಹಾರವಾಗಿದೆ. ಬಸವಾದಿ ಶಿವಶರಣರ ಕಾಯಕಪ್ರಜ್ಞೆ, ಆಧುನಿಕ ಯಂತ್ರ ನಾಗರಿಕತೆಯ ಕೊಳಕುಗಳಿಗೆ ಪರಿಹಾರವು ನಮ್ಮ ಜನಪದ ಜೀವನದಲ್ಲಿ ಹೇಗೆ ಬೆರೆತಿದೆ ಎನ್ನುವುದನ್ನು ಕಂಬಾರರವು ತುಂಬಾ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. "ಕನ್ನಡದಲ್ಲೇ ಅಲ್ಲ, ಇಡೀ ದೇಶದಲ್ಲಿ ಕಂಬಾರರಷ್ಟು ತೀವ್ರವಾಗಿ ನೆಲದ ವಾಸನೆ ತುಂಬಿಕೊಂಡು ಜತೆಯಲ್ಲಿ ನವ್ಯತೆ ಆಧುನಿಕತೆಗಳನ್ನು ಮೈಗೂಡಿಸಿಕೊಂಡಿರುವ ಸೃಜನಶೀಲ ನಾಟಕಕಾರ ಸಿಗುವುದು ದುರ್ಲಭ. ನನ್ನ ಅಭಿಪ್ರಾಯದಲ್ಲಿ ಇಂದಿನ ಎಲ್ಲಾ ನಾಟಕಕಾರರ ನಡುವೆ ಕಂಬಾರರು ಅದ್ವಿತೀಯರು. ಅವರ ಜಾಗದಲ್ಲಿ ಇನ್ನೊಬ್ಬರನ್ನು ಯೋಚಿಸುವುದು ನನಗಂತೂ ಸಾಧ್ಯವಿಲ್ಲ"(ಬೆನ್ನುಡಿ) ಎಂಬ ಬಿ.ವಿ. ಕಾರಂತರ ಮಾತುಗಳು ಕಂಬಾರರ ನಾಟ್ಯರಚನಾ ಕೌಶಲವನ್ನು ಮನಗಾಣಿಸುತ್ತವೆ.

**ಆಕರಗಳು:**


1. ಚಂದ್ರಶೇಖರ ಕಂಬಾರ, ಬೆಪ್ತಕ್ಕಡಿ ಬೋಳೇಶಂಕರ (ನಾಟಕ), ಅಂಕಿತ ಪ್ರಕಾಶನ, ಬೆಂಗಳೂರು,
2. ಬಸವರಾಜ ಮಲಶೆಟ್ಟಿ, ಚಂದ್ರಶೇಖರ ಕಂಬಾರ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1996.
3. ನಾಗವೇಣಿ ಎಚ್., ರಂಗಸಂಪನ್ನರು: ಡಾ. ಚಂದ್ರಶೇಖರ ಕಂಬಾರ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, 2004.